ಎಂ.ವಿ.ಸಿ. ನಂಃ 1506/2024
ಪಿ.ಡಬ್ಲ್ಯೂ-2 (ಡಾ.ಮಲ್ಲಿಕಾರ್ಜುನ)

ಮಧ್ಯಂತರ ಅರ್ಜಿ-12ರ ಆದೇಶದ ಮೇರೆಗೆ ದಿನಾಂಕ: 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ಪಿ.ಸಿ. 3ನೇ ಎದುರುದಾರ ಪರ ವಕೀಲರಿಂದಃ**

ನಾನು ಕಳೆದ 11 ವರ್ಷಗಳಿಂದ ವೈದ್ಯಕೀಯ ವೃತ್ತಿ ಮಾಡುತ್ತಿದ್ದೇನೆ. ನಾನು DNB ಮುಗಿಸಿರುತ್ತೇನೆ. ಅರ್ಜಿದಾರರು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ದಾಖಲ ಆಗಲು ಬಂದಾಗ ಈ ಅಪಘಾತದ ಬಗ್ಗೆ ನನಗೆ ಮಾಹಿತಿ ಕೊಟ್ಟಿರುತ್ತಾರೆ. ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ದಿನಾಂಕ 04/01/2024 ರಂದೇ ನಾನು ಸಂಬಂಧಪಟ್ಟ ಪೊಲೀಸ ಠಾಣೆಗೆ ಮಾಹಿತಿ ಕಳುಹಿಸಿರುತ್ತೇನೆ. ಪೊಲೀಸರು ಆಸ್ಪತ್ರೆಗೆ ಬಂದಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ.

2. ಪೊಲೀಸರು ನಮ್ಮ ಆಸ್ಪತ್ರೆಗೆ ಭೇಟಿ ಕೊಟ್ಟ ಬಗ್ಗೆ ಮತ್ತು ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳು ಪಡೆದುಕೊಂಡ ಬಗ್ಗೆ ಲಿಖಿತ ರೂಪದಲ್ಲಿ ನಮ್ಮ ಬಳಿ ಯಾವುದೇ ದಾಖಲ ಇರುವುದಿಲ್ಲ. ಈ ಅಪಘಾತ ಹೇಗಾಯಿತು ಎಂದು ನಮ್ಮ ಆಸ್ಪತ್ರೆಯ ದಾಖಲೆಗಳಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ, ಅದರೆ ವಿವರವಾಗಿ ನಮೂದಿಸಿಲ್ಲ. ಅಪಘಾತ ಪ್ರಕರಣಗಳಲ್ಲಿ ಅಪಘಾತ ಹೇಗಾಯಿತು ಎಂದು ಉಲ್ಲೇಖ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಪೊಲೀಸರು ಏನು ದಾಖಲೆಯನ್ನು ನಮ್ಮ ಆಸ್ಪತ್ರೆಯಿಂದ ತೆಗೆದುಕೊಂಡು ಹೋಗಿದ್ದಾರೆ ಎಂದು ನಮ್ಮ ಆಸ್ಪತ್ರೆಯಲ್ಲಿ ಉಲ್ಲೇಖ ಇರುತ್ತದೆ ಅದನ್ನು ಹಾಜರಪಡಿಸಲು ಏನು ತೊಂದರೆ ಇರುವುದಿಲ್ಲ. ಅರ್ಜಿದಾರರಿಗೆ ಸಹಾಯ

ಮಾಡುವ ಉದ್ದೇಶದಿಂದ ನಮ್ಮ ಆಸ್ಪತ್ರೆ ದಾಖಲೆಗಳಲ್ಲಿ ಈ ಪ್ರಕರಣ ರಸ್ತೆ ಅಪಘಾತ ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

3. ಅರ್ಜಿದಾರರ ಜೊತೆ ಆ ದಿವಸ ಯಾರು ಬಂದಿದ್ದರು ಅವರಿಗೆ ಏನು ಚಿಕಿತ್ಸೆ ಕೊಡಲಾಗಿದೆ ಎಂದು ನನಗೆ ದಾಖಲೆಗಳನ್ನು ನೋಡದೆ ಹೇಳಲು ಬರುವುದಿಲ್ಲ. ಅರ್ಜಿದಾರರಿಗೆ ಆದ ಗಾಯಕ್ಕೆ ನಾನು ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ ಅದು ಯಶಸ್ವಿಯಾಗಿರುತ್ತದೆ ಎಂದರೆ ಸರಿ. ಅರ್ಜಿದಾರರ ಮೂಳೆ ಮುರಿತಕ್ಕೆ ಒಳಜೋಡನೆಗಳನ್ನು ಅಳವಡಿಸಿರುತ್ತೇನೆ. ಅದು ಕೂಡಾ ಯಶಸ್ವಿಯಾಗಿರುತ್ತದೆ ಎಂದರೆ ಸರಿ. ಮುರಿದ ಮೂಳೆ ಸರಿಯಾಗಿ ಜೋಡನೆ ಆಗಲಿ ಎಂದು ಒಳಜೋಡನೆಗಳು ಹಾಕುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ಉತ್ತಮ ಚಿಕಿತ್ಸೆ ಕೊಡಲಾಗಿದೆ ಎಂದರೆ ಸರಿ. ನನ್ನ ಚಿಕಿತ್ಸೆಗೆ ಅರ್ಜಿದಾರರು ಉತ್ತಮವಾಗಿ ಸ್ಪಂದಿಸಿರುತ್ತಾರೆ ಎಂದರೆ ಸರಿ.

4. ಅರ್ಜಿದಾರರಿಗೆ ಸಂಪೂರ್ಣವಾಗಿ ಆರಾಮ ಆದ ನಂತರ ಅರ್ಜಿದಾರರ ಮೂಳೆ ಮುರಿತದ ಚೆಕ್-ಎಕ್ಸರೇ ತೆಗೆದುಕೊಂಡು ಅವರನ್ನು ಬಿಡುಗಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಡಿಸ್ಚಾರ್ಜ ಸಮ್ರಿಯಲ್ಲಿ ಅರ್ಜಿದಾರರು ಮುಂದುವರೆದ ಚಿಕಿತ್ಸೆಗೆ ಬರಬೇಕು, ನಿಯಮಿತವಾಗಿ ಔಷಧಿ ತೆಗೆದುಕೊಳ್ಳಬೇಕು, ವ್ಯಾಯಾಮ ಮಾಡಬೇಕೆಂದು ನಮೂದಿಸಿಲ್ಲ. ಅರ್ಜಿದಾರರು ಮುಂದುವರೆದ ಚಿಕಿತ್ಸೆ ತೆಗೆದುಕೊಂಡ ಬಗ್ಗೆ ನಮ್ಮ ಆಸ್ಪತ್ರೆಯ ದಾಖಲೆಗಳನ್ನು ಹಾಜರ ಮಾಡಿಲ್ಲ.

5. ಅರ್ಜಿದಾರರಿಗೆ ಆದ ಗಾಯದಿಂದ ಅರ್ಜಿದಾರರು ಗಟ್ಟಿಮಟ್ಟಾಗಿದ್ದರಿಂದ ಅರ್ಜಿದಾರರಿಗೆ ಆದ ಗಾಯಗಳಿಂದ ಅವರಿಗೆ ಯಾವುದೇ ರೀತಿಯ ಅಂಗ ನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಕೊಟ್ಟಿರುವ ಅಂಗ ನ್ಯೂನ್ಯತೆಯು ಕೇಂದ್ರ ಸರಕಾರದ ಅಧಿಸೂಚನೆ ಪಾಲಿಸಿ ಕೊಟ್ಟಿಲ್ಲ ಎಂದರೆ ಸರಿ. ನಾನು ಕೊಟ್ಟಿರುವ ಅಂಗ ನ್ಯೂನ್ಯತೆ ಅರ್ಜಿದಾರರ ಪ್ರತ್ಯೇಕವಾದ ಅಂಗಕ್ಕೆ ಇರುತ್ತದೆ ಎಂದರೆ ಸರಿ.

6. ಅರ್ಜಿದಾರರಿಗೆ ಯಾವುದೇ ಅಂಗ ನ್ಯೂನ್ಯತೆ ಇಲ್ಲ ಅವರು ಈಗಲೂ ಸಹ ಮೊದಲಿನ ಹಾಗೆ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರೂ ಸಹ ಅರ್ಜಿದಾರರಿಗೆ ಸಹಾಯ ಮಾಡಲು ಹೆಚ್ಚಿನ ಪ್ರಮಾಣದಲ್ಲಿ ಅಂಗ ನ್ಯೂನ್ಯತೆಯನ್ನು ಕೊಟ್ಟು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ